**ಸಿ.ಸಿ.ನಂ.: 223/2023**

ಪಿ.ಡಬ್ಲ್ಯೂ: **1**

(ಇಂದು ದಿನಾಂಕಃ **29-07-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಮುಂದುವರಿದ ಪಾಟೀ ಸವಾಲು – ಆರೋಪಿ ಪರ ಶ್ರೀ.ಬಿ.ಡಿ.ಎಸ್. ವಕೀಲರಿಂದ</u>**

1. ನಾನು ಈ ಹಿಂದಿನ ವಿಚಾರಣೆಯ ಸಂದರ್ಭದಲ್ಲಿ ಕ್ರಯ ಪತ್ರದ ಹಾಗೂ ನನ್ನ ಬ್ಯಾಂಕ್ ಖಾತೆಗಳ ವಿವರಗಳನ್ನು ಹಾಗೂ ನನ್ನ ಆದಾಯದ ಮೂಲವನ್ನು ಮುಂದಿನ ಮುದ್ದತ ಒಳಗಾಗಿ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎಂದು ಹೇಳಿದ್ದು, ಇಲ್ಲೀಯವರೆಗೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ಈ ದಿನಾ ನ್ಯಾಯಾಲಯಕ್ಕೆ ಪಾಸ್ ಪುಸ್ತಕವನ್ನು ತೆಗೆದುಕೊಂಡು ಬಂದಿದ್ದೇನೆ ಎಂದು ನುಡಿಯುತ್ತಾರೆ. ಅದನ್ನು ನಾನು ಈಗ ನ್ಯಾಯಾಲಯಕ್ಕೆ ನೀಡಲು ಬದ್ಧಳಿದ್ದೇನೆ ಎಂದು ನುಡಿಯುತ್ತಾರೆ.

2. ನಾನು ಈ ಪ್ರಕರಣದ ವ್ಯವಹಾರವನ್ನು ಹೊರತುಪಡಿಸಿ ಇದಕ್ಕೆ ಪೂರ್ವದಲ್ಲಿ ಆರೋಪಿತಳು ನನ್ನ ಬಳಿ ಸಂಘಕ್ಕೆ ಬೇಕು ಎಂದು ರೂ.5000/- ಅಥವಾ ರೂ.10000/- ವನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದ್ರಿ ಹಣವನ್ನು ಮರು ಪಾವತಿ ಮಾಡುತ್ತಿದ್ದರು. ನಾನು ಈ ಮೇಲೆ ಹೇಳಿದ ರೂ.5000/- ಹಾಗೂ ರೂ. 10000/- ಗಳ್ನು ನಗದಾಗಿ ಆರೋಪಿತಳಿಗೆ ನೀಡಿರುತ್ತೇನೆ. ನನಗೆ ಆರೋಪಿತಳು ಒಂದೆರಡು ಬಾರಿ ಸದ್ರಿ ಹಣವನ್ನು ನಗದಾಗಿ ನೀಡಿದ್ದು, ಕೆಲವೊಂದು ಸಲ ಗೂಗಲ್ ಪೇ ಮುಖಾಂತರ ಈ ಪ್ರಕರಣದ ಪೂರ್ವ ವ್ಯವಹಾರದ ಕುರಿತಾಗಿ ಹಣವನ್ನು ಮರು ಪಾವತಿ ಮಾಡುತ್ತಿದ್ದಳು. ಆರೋಪಿತಳು ರೂ.5000/- ಹಾಗೂ ರೂ. 10000/- ಗಳನ್ನು ಮರು ಪಾವತಿ

ಮಾಡುವ ಸಂದರ್ಭದಲ್ಲಿ ನಾನು ಆಕೆಯಿಂದ ಭದ್ರತೆಗಾಗಿ ಚೆಕ್‌ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**3.** 7892420078 ನನ್ನ ದೂರವಾಣಿ ಸಂಖ್ಯೆ ಆಗಿರುತ್ತದೆ.

a) ದಿಃ 29/08/2021 ರಂದು ರೂ.1990/-

b) ದಿಃ 29/10/2021 ರಂದು ಆರೋಪಿತಳು ನನಗೆ ಗೂಗಲ ಪೇ ಮುಖಾಂತರ ರೂ.4500/- ನ್ನು

c) ದಿಃ 30/12/2021 ರಂದು ರೂ.4500/-

d) ದಿಃ 04/01/2022 ರಂದು ರೂ.5000/-

e) ದಿಃ 05/03/2022 ರಂದು ರೂ.500/-

f) ದಿಃ 30/03/2022 ರಂದು ರೂ.5000/-

g) ದಿಃ 07/07/2022 ರಂದು ರೂ.5000/-

h) ದಿಃ 17/09/2022 ರಂದು ರೂ.2000/-

i) ದಿಃ 29/09/2022 ರಂದು ರೂ.1500/-

**4.** ಈ ಮೇಲಿನಂತೆ ಆರೋಪಿತಳು ತನ್ನ ಗೂಗಲ್ ಪೇ ಮುಖಾಂತರ ಹಣವನ್ನು ಪಾವತಿ ಮಾಡಿದ್ದಾಳೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

**5.** ನಾನು ಆರೋಪಿತಳಿಗೂ ಕೇವಲ ರೂ.15000/- ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತಳಿಗೆ ನಾನು ನೀಡಿದ ರೂ.15,000/- ಕ್ಕೆ ಆಕೆಯು ಮೀಟರ ಬಡ್ಡಿಯನ್ನು ನೀಡಿ

**ಸಿ.ಸಿ.ನಂ.: 223/2023**

ಪಿ.ಡಬ್ಲ್ಯೂ: **1**

ಈ ಮೇಲೆ ಹೇಳಿದಂತೆ ಸಾಲವನ್ನು ಚುಕ್ತಾ ಪಡಿಸಿದ್ದಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ತಾರೀಖದಂದು ಆರೋಪಿತಳು ಸಂಪೂರ್ಣವಾದ ಸಾಲವನ್ನು ಚುಕ್ತಾ ಮಾಡಿರುವುದರಿಂದ ಆರೋಪಿತಳು ದಿಃ 10/11/2022 ರಂದು ನನ್ನನ್ನು ಭೇಟ್ಟಿಯಾಗಲಿಲ್ಲ ಎಂದರೆ ಸರಿಯಲ್ಲ.

**6.** ನಿ.ಪಿ.3 ಆರೋಪಿತಳಿಗೆ ಜ್ಯಾರಿಯಾಗಲಿಲ್ಲ ಎಂದರೆ ಸರಿಯಲ್ಲ. ಸದ್ರಿ ಸಂದರ್ಭದಲ್ಲಿ ಆರೋಪಿತಳು ನಿ.ಪಿ.3 ರಲ್ಲಿ ನಮೂದಿಸಿದ ವಿಳಾಸದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಸಹಿಯ ಶಾಹಿ ಹಾಗೂ ನಿಪಿ 1 ರಲ್ಲಿ ಬರೆದಿರುವಂತಹ ವಿವರಗಳ ಶಾಹಿಯು ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಎರಡು ಶಾಹಿಗಳು ಬೇರೆ ಬೇರೆ ಆಗಿದ್ದರೂ ಸಹ ನನ್ನ ಸುಳ್ಳು ಪ್ರಕರಣ ಹೊರಗೆ ಬರುತ್ತದೆ ಎಂಬ ಉದ್ದೇಶದಿಂದ ಇಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**7.** ನ್ಯಾಯಾಲಯದಿಂದ ಆರೋಪಿತಳಿಗೆ ಸಮನ್ಸ ಹೋದಂತಹ ಸಂದರ್ಭದಲ್ಲಿ ಆಕೆಯು ನನ್ನನ್ನು ಭೇಟ್ಟಿಯಾಗಿದ್ದು, ನಾನು ಆಕೆಗೆ ಪ್ರಕರಣವನ್ನು ಹಿಂದೆ ತೆಗೆಯುತ್ತೇನೆ ಎಂದು ಆಶ್ವಾಸನೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**8.** ದಿಃ 01/08/2021 ರಂದು ನಾನು ಆರೋಪಿತಳಿಗೆ ರೂ.150000/- ಸಾಲವನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ರೂ, 150000/- ಸಾಲವನ್ನು ನೀಡುವಷ್ಟು ಆರ್ಥಿಕ ಸಾಮರ್ಥ್ಯ ನನಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಆರ್ಥಿಕ ಸಾಮರ್ಥ ತಿಳಿಯುತ್ತದೆ ಎಂಬ

ಕಾರಣದಿಂದಾಗಿ ನಾನು ಇಲ್ಲೀಯವರೆಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಲು ಬದ್ದನಿದ್ದೇನೆ ಎಂದು ನುಡಿಯುತ್ತಾರೆ.

9. ದಿಃ 01/08/2021 ರಂದು ಆರೋಪಿತಳಿಗೆ ರೂ.150000/- ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತಳಿಗೆ ರೂ.15000/- ಸಾಲವನ್ನು ನೀಡುವಂತಹ ಸಂದರ್ಭದಲ್ಲಿ ಆಕೆಯಿಂದ ಭದ್ರತೆಗಾಗಿ ಪಡೆದುಕೊಂಡ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

10. ಆರೋಪಿತಳು ನನಗೆ ನಾನು ಫಿರ್ಯಾದಿಯಲ್ಲಿ ನಮೂದಿಸಿದಷ್ಟು ಹಣವನ್ನು ನೀಡಲು ಬಾಧ್ಯಸ್ಥಳು ಅಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಹಣದ ವಸೂಲಿಗಾಗಿ ನಿಪಿ 1 ನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ 1 ನ್ನು ದುರುಪಯೋಗಪಡಿಸಿಕೊಂಡಿರುವುದರಿಂದ ಆರೋಪಿತಳಿಗೆ ಪರಿಹಾರವನ್ನು ನೀಡಲು ಬಾಧ್ಯಸ್ಥಳು ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ